



ಅರುಣ ಪಿ. ಭಟ್ಟ

## ವಾರಭವಿಷ್ಯ 22.4.2021ರಿಂದ 28.4.2021ರವರೆಗೆ




ಅನೀರಿಕ್ಷಿತವಾಗಿ ವಿವಾಹ ನಿರೀಕ್ಷಿತರಿಗೆ ಪ್ರಸ್ತಾವ ಬರುವುದು. ಮನೆಯಲ್ಲಿನ ಆರ್ಥಿಕ ಸಂಕಷ್ಟ ಬಗೆಹರಿಯುವುದು. ಕಲಾವಿದರಿಗೆ ಉತ್ತಮ ಲಾಭ ಸಿಗಲಿದೆ. ನೌಕರಿಯಲ್ಲಿ ಪ್ರಮೋಷನ್. ವಿಧ್ಯಾರ್ಥಿಗಳಿಗೆ ಉಚ್ಛ ಶಿಕ್ಷಣ ಭಾಗ್ಯ. ಆದರೆ ಕೌಟುಂಬಿಕ ಜವಾಬ್ದಾರಿಯಲ್ಲಿ ಹಿನ್ನಡೆ. ಮೂತ್ರ ಜನಕಾಂಗ ಪೀಡೆ. ಶುಭದಿನ 25. ಶ್ರೀಕೃಷ್ಣ ಪೂಜೆ ಉಪವಾಸ ಮಾಡಿರಿ. ತುಲಸಿ ಅರ್ಚನೆ ಮಾಡಿರಿ.

---




ಪ್ರಾರಂಭದ ಎರಡು ದಿನಗಳಲ್ಲಿ ಬಂಧುಗಳಿಂದ ಸುವಾರ್ತೆ ಸಿಗಲಿದೆ. ಗೃಹ ನಿರ್ಮಾಣ ಕೆಲಸಗಳಲ್ಲಿ ಅನೀರಿಕ್ಷಿತ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ. ನಿರುದ್ಯೋಗಿಗಳಿಗೆ ಸರಕಾರಿ ಉದ್ಯೋಗ ಲಾಭ. ಹಲವು ಮೂಲಗಳಿಂದ ಬರಬೇಕಾದ ಹಣಕಾಸು ಬರುತ್ತದೆ. ಮಿತ್ರರರು ಉಂಟು ಮಾಡುವ ಭಾದೆಯಿಂದ ಅಸಂತೋಷವಾಗುತ್ತದೆ. ಶುಭದಿನ 26. ಕಾಲ ಭೈರವಾಷ್ಟಕ ಪಠಣ ಮಾಡಿರಿ.

---




ಬಹುದಿನಗಳ ಗೃಹ ಕಲಹಕ್ಕೆ ಮುಕ್ತಿ ದೊರೆಯುವುದು. ಸ್ಪರ್ಧಾತ್ಮಕ ಪರೀಕ್ಷೆ ಅಭ್ಯರ್ಥಿಗಳಿಗೆ ಉತ್ತಮ ಯಶಸ್ಸು ಸಿಗಲಿದೆ. ಸರಕಾರಿ ನೌಕರದಾರರಿಗೆ ಪದೋನ್ನತಿ ಪ್ರಾಪ್ತವಾಗಲಿದೆ. ಐಚ್ಛಿಕ ಸ್ಥಳಕ್ಕೆ ವರ್ಗಾವಣೆಯಾಗುವ ಸಾಧ್ಯತೆ ಇದೆ. ವಾರಾಂತ್ಯದಲ್ಲಿ ಆಪ್ತರಿಂದ ಸನ್ಮಾನ. ಅನೀರಿಕ್ಷಿತ ಚಿಕ್ಕ ಪ್ರವಾಸ. ಕಾಗದ ಪತ್ರಗಳ ಕೆಲಸ. ಶುಭದಿನ 26. ನವನಾಗ ನಾಮ ಸ್ತೋತ್ರ ಮಾಡಿರಿ.

---




ಸ್ವತಂತ್ರ ಉದ್ಯೋಗಸ್ಥರಿಗೆ ನಿರೀಕ್ಷೆಗಿಂತ ಹೆಚ್ಚಿನ ಲಾಭ ಸಿಗಲಿದೆ. ವಿದ್ಯುತ್ ಗುತ್ತಿಗೆದಾರರಿಗೆ ಜನರಿಂದ ಪ್ರಶಂಸೆ. ಪರ ಊರಿನ ಪ್ರವಾಸದಲ್ಲಿ ಜ್ವರ ಪೀಡೆ ಕಾಣಿಸಿತು ಎಚ್ಚರ ವಹಿಸಿ. ಮಕ್ಕಳು ಮುನಿಸಿಕೊಂಡಾರು ಎಚ್ಚರ ಇರಲಿ. ಶತ್ರುಗಳ ಕಾಟ ನಡೆಯೋದಿಲ್ಲ. ಮನೆಗೆ ಅಪರೂಪದ ಅತಿಥಿಗಳ ಆಗಮನ. ಆರೋಗ್ಯ ಭಾಗ್ಯ. ಶುಭದಿನ 28. ಪುಷ್ಯರಾಗ ಹರಳು ದಾರಣೆ ಮಾಡಿರಿ. ದತ್ತಾತ್ರೇಯ ಸ್ತುತಿ ಮಾಡಿರಿ.

---




ನೆನೆಗುದಿಗೆ ಬಿದ್ದ ಕೆಲಸಗಳು ಕೊನೆಯ ಹಂತ ತಲುಪುತ್ತವೆ. ಹೊಸ ನಿವೇಶನ ಖರೀದಿಗೆ ಸಕಾಲ. ಆದರೆ ಮನೆ ಬದಲಾಯಿಸಿದರೆ ತೊಂದರೆ ಉಂಟಾಗಬಹದು. ನಿರೀಕ್ಷಿತವಾದ ಜನರಿಂದ ಸನ್ಮಾನ– ಪುರಸ್ಕಾರಗಳು ಸಿಗಲಿವೆ. ಸಂಕಟದ ಮಧ್ಯೆದಲ್ಲೂ ಮಿಂಚುವ ಅವಕಾಶ ನಿಮ್ಮಪಾಲಿಗೆ ಇದೆ. ಹೊಸವಸ್ತು ಖರೀದಿ ಪ್ರಕ್ರಿಯೆ. ಶುಭದಿನ 23. ದಶರಥ ವಿರಚಿತ ಶನಿ ಸ್ತೋತ್ರ ಮಾಡಿರಿ.

---




ಉತ್ತಮವಾದ ವ್ಯವಸ್ಥೆಯಲ್ಲಿ ಇದ್ದಂತೆ ಅನ್ನಿಸಿದರೂ ಒಂದೊಂದಾಗಿ ಕರಗುವುವವು. ಸೇವಕರು ನೆಲೆ ನಿಲ್ಲುವುದಿಲ್ಲ ಅವರು ನಿಮ್ಮಿಂದ ತಪ್ಪಿಸಿಕೊಳ್ಳುತ್ತಾರೆ. ಹೆಂಡತಿಗೆ ತವರುಮನೆ ವಾಸ. ಮದುವೆಯ ನಿರೀಕ್ಷೆಯಲ್ಲಿ ಇರುವವರಿಗೆ ವಿವಾಹ ಪ್ರಸ್ತಾಪಕ್ಕೆ ಅನುಕೂಲ. ಮೋಜಿಗಾಗಿ ಅಧಿಕ ಖರ್ಚು ಮಾಡುತ್ತೀರಿ. ಕಾಲು ನೋವು ಕಾಡಬಹುದು. ಶುಭದಿನ 27. ನವಧಾನ್ಯಗಳನ್ನು ಈಶ್ವರ ಗುಡಿಗೆ ನೀಡಿರಿ.

---




ಸರ್ವ ಪ್ರಕಾರದಿಂದಲೂ ಉತ್ತಮ ಅವಕಾಶಗಳು ಸಿಗಲಿವೆ. ದೇವಾಲಯ ಪ್ರಮುಖರಿಗೆ ಸರಕಾರಿ ಅನುದಾನ ಸಿಗುತ್ತದೆ. ಗಂಡ ಯಾ ಹೆಂಡತಿಗೆ ಉತ್ಕರ್ಷ ಕಾಲ. ಸಾಮಾಜಿಕ ಮನ್ನಣೆ ಪರದೇಶ ಗಮನ ಯೋಗವಿದೆ. ವ್ಯಕ್ತಿತ್ವದ ಛಾಪು ಒತ್ತುವಿರಿ. ಹೊಸ ಮಿತ್ರರಿಂದ ಲಾಭ. ವಾರದ ಕೊನೆಯ ದಿನ ನಷ್ಟ. ಶುಭದಿನ 25. ಬ್ರಹ್ಮೋತ್ತರ ಖಂಡ ಪಠಿಸಿರಿ.

---




ಸಾಡೇಸಾತಿ ಇನ್ನೂ ಐದು ತಿಂಗಳಿದೆ. ಸ್ಥಿರ ನೌಕರಿ ಪ್ರಾಪ್ತಿಯಾಗಲಿದೆ. ಸತತ ಪ್ರವಾಸ ಅನಿವಾರ್ಯವಾಗುತ್ತದೆ. ಉನ್ನತ ಅಧಿಕಾರ ಪ್ರಾಪ್ತಿ. ರಾಜಕಾರಣಿಗಳಿಗೆ ಅತ್ಯಂತ ಶುಭ. ಬಹುದಿನದ ಪರಿಶ್ರಮಕ್ಕೆ ಪ್ರತಿಫಲ. ನವ ಜೀವನದಲ್ಲಿ ಕಾಲಿಡುವ ತರುಣರಿಗೆ ಶುಭೋದಯ. ವಾರಾಂತ್ಯದಲ್ಲಿ ನೌಕರಿದಾರರಿಗೆ ಯಶಸ್ಸು. ಶುಭದಿನ 27. ಸುದರ್ಶನ ಜಪ 1200 ಮಾಡಿರಿ.

---




ವಿದೇಶ ವ್ಯವಹಾರದ ಸಂಬಂಧ ನಿಮ್ಮ ಯತ್ನ ಯಶಸ್ಸು ಕೊಡುವುದು. ಹಣ ಖರ್ಚಾದರೂ ಸಾಮಾಜಿಕ ಮನ್ನಣೆ ಲಭಿಸುವುದು. ಬಹು ದಿನಗಳ ನಂತರ ಮಕ್ಕಳ ಬಗ್ಗೆ ಸುವಾರ್ತೆ ಕೇಳುವಿರಿ. ಉತ್ಸವ ಪ್ರದರ್ಶನಗಳಲ್ಲಿ ಭಾಗವಹಿಸುವಿರಿ. ದೇವತಾ ಕಾರ್ಯ, ಪೂಜೆ ಪುನಸ್ಕಾರದಲ್ಲಿ ಭಾಗವಹಿಸುವ ಅವಕಾಶ ಇದೆ. ಶುಭದಿನ 28. ಕುಲದೇವತಾ ಪ್ರಾರ್ಥನೆ ಮಾಡಿರಿ.

---




ಏಕಾದಶ ಗುರುವಿನ ಅನುಗ್ರಹ ಒಂದು ಬಿಟ್ಟರೆ ಉಳಿದ ಆಕಾಶ ಕಾಯಗಳೆಲ್ಲ ಪ್ರತಿಕೂಲವಾಗಿರುವುವು. ಬಂಧುಗಳು ಶತ್ರುಗಳೊಡನೆ ಸೇರುವ ಅಪಾಯವೂ ಇದೆ. ಅಷ್ಟಮದ ರವಿಕುಜರಿಂದ ಅಗ್ನಿ ಭಯವಿದೆ. ಆರೋಗ್ಯದಲ್ಲಿ ಸ್ವಲ್ಪ ತೊಂದರೆ ಕಾಣಿಸಿಕೊಳ್ಳಲಿದೆ. ಅಧಿಕಾರಿಗಳಿಗೆ ಅಧಿಕಾರ ಚ್ಯುತಿಯ ಸಂದರ್ಭ. ಎಚ್ಚರದಿಂದ ವ್ಯವಹರಿಸಿ. ಶುಭದಿನ 26. ನವಗ್ರಹ ಶಾಂತಿ ಮಾಡಿಸಿ.

---




ಹೊಸಮನೆಯ ಪ್ರವೇಶಕ್ಕೆ ಸಿದ್ಧತೆಯಾಗುವುದು. ಉದ್ಯೋಗಸ್ಥ ಮಹಿಳೆಯರಿಗೆ ಉತ್ತಮ. ಕೆಲಸದಲ್ಲಿ ಪದೋನ್ನತಿಯಾಗುವುದು. ಇಚ್ಛಿತ ಸ್ಥಳಕ್ಕೆ ವರ್ಗಾವಣೆ ಆಗುವುದು. ಆರ್ಥಿಕವಾಗಿ ನಿರೀಕ್ಷಿತ ಲಾಭ. ಕ್ರಯ ವಿಕ್ರಯಕ್ಕೆ ಸಕಾಲ. ಮಕ್ಕಳ ಭಾಗ್ಯೋದಯ ಸಂಬಂಧದಲ್ಲಿ ಯಾರದಾದರೂ ಮದುವೆಯ ಪ್ರಯತ್ನದಲ್ಲಿ ಯಶಸ್ಸು. ಮಹತ್ವದ ಕೆಲಸದಲ್ಲಿ ಮುನ್ನಡೆ. ಶುಭದಿನ 26. ಶಂಕರಾಚಾರ್ಯರ ಸೌಂದರ್ಯ ಲಹರಿ ಪಠಿಸಿರಿ.

---




ನವ ವಿವಾಹಿತರಿಗೆ ಸಂತತಿ ಪ್ರಾಪ್ತಿ ಯಾ ಪ್ರಾಪ್ತಿಯ ಲಕ್ಷಣ. ಅನೇಕ ದಿನಗಳ ನಿರುದ್ಯೋಗ ಸಮಸ್ಯೆ ಬಗೆ ಹರಿಯುವುದು. ಹೊಟ್ಟೆ ಕಿಚ್ಚಿನ ಜನರಿಂದ ಪರೋಕ್ಷ ತೊಂದರೆ ಇದೆ. ಎಲ್ಲ ಕೆಲಸಗಳಿಂದ ಧನಲಾಭ. ಷೇರು ವ್ಯವಹಾರದಾರರಿಗೆ ಬಂಡವಾಳದ ಹಿಡಿತವಿರಲಿ. ನಷ್ಟ ಎದುರು ಆಗುವ ಸಾಧ್ಯೆ ಇದೆ. ಶುಭದಿನ 28. ಗಣಪತಿಗೆ 1008 ದೂರ್ವಾರ್ಚನೆ ಮಾಡಿರಿ.